ಕೋಟಾ ಸರಬರಾಯಿ ಮಾಡಲಾಯಿತು. ಇದು ಇರತಕ್ಕ ಪರಿಸ್ಥಿತಿ.

Insufficiency of Cloth quota for Hawkers in Villages.

Q.—96. **Sri G. NARAYANA GOWDA** (Kolar District—General).—Will the Government be pleased to state :—

(*a*) the quantity of cloth that is being given to the ready-made dress shop owners in Bangalore City and Mysore City ;

(*b*) the quantity of cloth that is allotted to the hawkers in rural parts of the State (particulars to be furnished district-wise) ?

A.—**The Hon'ble Sri K. CHENGALARAYA REDDY** (Chief Minister).—

(*a*) A basic quota of 64 bales per month has been fixed for the ready-made dressers in Bangalore City, but this is limited to the quantity of fents and seconds supplied by the Bangalore Woollen, Cotton and Silk Mills, Ltd., Bangalore, from time to time.

No quota is fixed for ready-made dressers in Mysore City, but *ad-hoc* quotas are released for their use as and when supplies are made from mills.

(*b*) No cloth is allotted to hawkers during the present control period.

ಶ್ರೀ ಜಿ. ನಾರಾಯಣಗೌಡರು. — ಬೆಂಗಳೂರು ಸಿಟಿಯಲ್ಲಿ ಬೇಸಿಕ್ ಕೋಟಾ ಕೊಡುತ್ತೇವೆ ಎಂದು ಹೇಳಿದ್ದೀರಿ. ಸ್ಪೆಷಲ್‌ಕೋಟಾ ಕೊಟ್ಟಿದ್ದೀರಾ ?

*ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್ ಬೇಕು.

ಶ್ರೀ ಜಿ. ನಾರಾಯಣಗೌಡರು.—ಗ್ರಾಮಾಂತರ ಪ್ರದೇಶದಲ್ಲಿ ಹಾಕರ್ಸ್‌ಗೆ ಕೊಡುತ್ತಿಲ್ಲ ಎಂದು ಹೇಳಿದ್ದೀರಿ. ಗ್ರಾಮಾಂತರ ಪ್ರದೇಶದಲ್ಲೂ ಹಾಕರ್ಸ್ ಇದ್ದಾರೆ ಎಂಬುದು ಗೊತ್ತೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇದ್ದಾರೆ.

ಶ್ರೀ ಜಿ. ನಾರಾಯಣಗೌಡರು.—ಅವರ ಕೋಟಾ ಏಕೆ ಕೊಡಲಿಲ್ಲ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇರುವ ಕೋಟಾ ನೋಡಿಕೊಂಡು ಅಲಾಟ್ ಮಾಡಿದ್ದೇವೆ. ಈಗ ಅದನ್ನು ಕೊಡುವುದಕ್ಕೆ ಸಾಲದೆ ಇರುವುದರಿಂದ ತೊಂದರೆಯಾಗಿದೆ. ಕೋಟಾ ಜಾಸ್ತಿಕೊಡಲು ಸರ್ಕಾರದವರು ಪ್ರಯತ್ನ ಮಾಡುತ್ತಾ ಇದ್ದಾರೆ. ಆದ್ದರಿಂದ ಇದೆಲ್ಲವೂ ಸಹ availability of supplies ಮೇಲೆ ಅನುಸರಿಸುತ್ತವೆ ಎಂಬುದನ್ನು ತಮ್ಮ ಅವಗಾಹನೆಗೆ ತರುತ್ತೇನೆ.

ಶ್ರೀ ಜಿ. ನಾರಾಯಣಗೌಡರು.—ಬೆಂಗಳೂರು, ಮೈಸೂರು ಪಟ್ಟಣಗಳಿಗಿಂತ ಹೆಚ್ಚಾಗಿ ಹಳ್ಳಿಗಾಡು ಪ್ರದೇಶಗಳ ಹಾಕರ್ಸ್‌ಗೆ ಕೋಟಾ ಕೊಡುವುದು ಒಳ್ಳೆಯದಲ್ಲವೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದು ಅಭಿಪ್ರಾಯದ ವಿಚಾರ ಅದನ್ನೂ ಸಹ ಸರ್ಕಾರದವರು ಪರಿಶೀಲನೆ ಮಾಡುತ್ತಾರೆ.

Sri M. GOVINDA REDDY (Chitaldrug District—General).—Are any conditions imposed on the quota holders regarding the use or distribution of the cloth ?

The Hon'ble Sri K. CHENGALARAYA REDDY.—I cannot say anything definitely at this stage.

Sri M. GOVINDA REDDY.—Usually allotting quotas is subject to certain conditions, is it not ?

The Hon'ble Sri K. CHENGALARAYA REDDY.—Presumably ; But I cannot tell the Hon'ble Member definitely as to what the conditions are.

Sri A. BHEEMAPPA NAIK (Chitaldrug District—General).—Are the prices fixed for the ready-made dresses just as the prices are fixed for cloth ?

The Hon'ble Sri K. CHENGALARAYA REDDY.—Not that I am aware of.

Sri A. BHEEMAPPA NAIK.—Would it not in that case amount to breaking the control order by these means ?

The Hon'ble Sri K. CHENGALARAYA REDDY.—I do not think so.

Sri A. BHEEMAPPA NAIK.—Is any procedure laid down as to how prices for ready-made dresses should be fixed ?

The Hon'ble Sri K. CHENGALARAYA REDDY.—I do not think any rules have been framed in that behalf.

Sri A. BHEEMAPPA NAIK.—Will the Government consider the desirability of fixing the prices of ready-made dresses taking into consideration the price of the cloth, stitching charges and all that ?

The Hon'ble Sri K. CHENGALARAYA REDDY.—We will examine.

Selection for I.A.S. Cadre and safeguarding the interests of Officers not so selected.

Q.—162. Sri C. R. BASAPPA (Tumkur District—General).—

Will the Government be pleased to state :—

(*a*) the recommendations of the Special Recruitment Board in connection with selecting candidates to I.A.S. and I.P.S. ;

(*b*) whether these recommendations have been examined by this Government and approved ;

(*c*) what steps have been taken by them to safeguard the interest of the officers who have not been selected in I.A.S. ;

(*d*) the names of persons who have been selected to the Junior and Senior Cadres of the I.A.S. and I.P.S. ;

(*e*) the posts which are set apart for the I.A.S. and I.P.S. people ?

A.—The Hon'ble Sri K. CHENGALARAYA REDDY (Chief Minister).—

(*a*) The recommendations of the Special Recruitment Board are in a confidential stage and cannot therefore be disclosed now.

(*b*) They have been considered by this Government and their views communicated to the Government of India.

(*c*) Government have taken notice of the consequences of the establishment of an I.A.S. cadre in Mysore State based on the recommendations of the Government of India and are taking whatever effective steps are necessary for safeguarding the legitimate interest of the officers. It will not be in the public interest to disclose at this stage the steps taken.

(*d*) This is still confidential.

(*e*) This has not been finalised yet.

ಶ್ರೀ ಸಿ. ಆರ್. ಬಸಪ್ಪನವರು.— (ಎ) ಪ್ರಶ್ನೆಗೆ ಉತ್ತರವಾಗಿ ಐ.ಎ.ಎಸ್. ಮತ್ತು ಐ.ಪಿ.ಎಸ್. ಸರ್ವಿಸ್ಸುಗಳಿಗೆ ಉಮೇದುವಾರರನ್ನು ಚುನಾಯಿಸುವಬಗ್ಗೆ ಬೋರ್ಡಿನವರು ಮಾಡಿರತಕ್ಕ ಸಲಹೆಗಳು ಇನ್ನೂ ರಹಸ್ಯವಾಗಿಡಲ್ಪಟ್ಟಿವೆ ಎಂದು ಹೇಳಿದ್ದೀರಿ. ಹಾಗಾದರೆ ಎಷ್ಟು ದಿನದಲ್ಲಿ ಈ ವಿಚಾರಗಳನ್ನು ನಮ್ಮ ಮುಂದೆ ಇಡುವುದಕ್ಕಾಗುತ್ತದೆ ಎಂಬುದನ್ನು ತಿಳಿಸಲಾಗುತ್ತದೆಯೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಭಾರತ ಸರ್ಕಾರದವರು ಸಲಹೆ ಮಾಡಿದ್ದಾರೆ. ಅದನ್ನು ಮೈಸೂರು ಸರ್ಕಾರದವರು ಪರಿಶೀಲನೆಮಾಡಿ ಅವರಿಗೆ ನಮ್ಮ ಅಭಿಪ್ರಾಯಗಳನ್ನು ಪ್ರೊವಿಜನಲ್ ಆಗಿ ತಿಳಿಸಲಾಯಿತು. ಇದೆಲ್ಲವನ್ನೂ ಇನ್ನೊಂದು ವಾರದಲ್ಲಿ ಡೆಲ್ಲಿಯಲ್ಲಿ ಆಗತಕ್ಕ ಮಿಟಿಂಗ್‌ನಲ್ಲಿ ಚರ್ಚೆ ಮಾಡಬೇಕಾಗಿದೆ. ಅಲ್ಲಿಂದ ಬಂದಿರತಕ್ಕ ಸಲಹೆ ರಹಸ್ಯವಾದುದು ಎಂದು ಹೇಳಿರುವುದರಿಂದ ಸಧ್ಯದಲ್ಲಿ ಸಭೆಯಮುಂದೆ ಇಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಇದರಬಗ್ಗೆ ಸಾಧ್ಯವಾದಷ್ಟು ಮಟ್ಟಿಗೂ ಈ ಅಧಿವೇಶನದಲ್ಲೇ ಒಂದು ಹೇಳಿಕೆ ಕೊಟ್ಟು ಈ ಯೋಜನೆಬಗ್ಗೆ ಇರತಕ್ಕ ವಿವರಗಳನ್ನು ಸಾಧ್ಯವಾದಷ್ಟೂ ಚರ್ಚೆಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಸರ್ಕಾರದವರ ಅಭಿಪ್ರಾಯವಾಗಿದೆ. ಆದ್ದರಿಂದ ಈ ಚರ್ಚೆಬಗ್ಗೆ ಹೆಚ್ಚಿನ ಉಪಪ್ರಶ್ನೆಗಳನ್ನು ಹಾಕಲು ಈಗ ಅವಕಾಶ ತೆಗೆದುಕೊಳ್ಳುವುದಕ್ಕೆ ಅಷ್ಟು ಅವಶ್ಯಕತೆಯಿಲ್ಲವೆಂದು ಕಂಡುಬರುತ್ತದೆ. ಸರ್ಕಾರದವರು ಇದರಬಗ್ಗೆ ಆದಷ್ಟುಬೇಗ ಒಂದು ಹೇಳಿಕೆ ಕೊಡುತ್ತಾರೆ.

ಶ್ರೀ ಸಿ. ಆರ್. ಬಸಪ್ಪನವರು.—ತಾವು ಗೋಪ್ಯವಾಗಿ ತಮ್ಮ ಅಭಿಪ್ರಾಯಗಳನ್ನು ಇಂಡಿಯಾ ಸರ್ಕಾರದವರಿಗೆ ತಿಳಿಸಿ ಎಷ್ಟು ದಿನಗಳಾಯಿತು ?

ಅಧ್ಯಕ್ಷರು.—ಈ ವಿಚಾರವಾಗಿ ಇದೇ ಅಧಿವೇಶನದಲ್ಲೇ ಸಾಧ್ಯವಾದಷ್ಟು ಜಾಗ್ರತೆ ಒಂದು